2) ಒಟ್ಟು ರೂ.96.99 ಕೋಟಿಗಳಿಗೆ ಪ್ರಸ್ತಾವನೆ ಕಳುಹಿಸಲಾಗಿದೆ. ಆ ಪೈಕಿ ರೂ.20.19 ಕೋಟಿ ಹಣ ಬಿಡುಗಡೆ ಆದೇಶ ಬಂದಿದೆ. ರಾಜ್ಯ ಸರ್ಕಾರದಲ್ಲಿ ಇನ್ನೂ ಜಮೆ ಆಗಿರುವುದಿಲ್ಲ.

3) ಅತೀ ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಲು ಆದೇಶ ನೀಡಲಾಗುವುದು.

ಜಯದೇವ ಹೃದ್ರೋಗ ಸಂಸ್ಥೆಗೆ ನೂತನ ಕಟ್ಟಡ ಮತ್ತು ಹೆಚ್ಚುವರಿ ವೈದ್ಯಕೀಯ ಸೌಲಭ್ಯ.

148(445)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಆರೋಗ್ಯ ಮತ್ತು ಕುಟುಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಗೆ ನೂತನವಾದ ವಿಶಾಲವಾದ ಕಟ್ಟಡದ ಸೌಲಭ್ಯ ದೊರಕಿಸಲು ಹಾಗೂ ರೋಗಿಗಳಿಗೆ ಹೆಚ್ಚುವರಿ ವೈದ್ಯಕೀಯ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದರ ವಿವರಗಳೇನು?

ಇ) ಕಟ್ಟಡದ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ?

ಈ) ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಮಾಹೆಯಾನ ಎಷ್ಟು ತೆರೆದ ಹೃದಯದ ಶಸ್ತ್ರ ಚಿಕಿತ್ಸೆ ಮಾಡಲಾಗುತ್ತಿದೆ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಈ ಹೊಸ ಕಟ್ಟಡದಲ್ಲಿ 519 ಹಾಸಿಗೆಗಳನ್ನೊಳಗೊಂಡಿದೆ. ಇದು ಆರು ಮುಖ್ಯ ಶಸ್ತ್ರ ಚಿಕಿತ್ಸಾ ಕೊಠಡಿ ಮತ್ತು ಒಂದು ಮೈನರ್ ಶಸ್ತ್ರ ಚಿಕಿತ್ಸಾ ಕೊಠಡಿ ಹಾಗೂ ನಾಲ್ಕು ಹೃದಯ ನಳಿಕೆ (ಕ್ಯಾತಲ್ಯಾಬ್) ವಿಭಾಗಗಳಿವೆ. ತುರ್ತು ಹೊರ ರೋಗಿ ವಿಭಾಗವನ್ನು ಸಹ ಒದಗಿಸಲಾಗಿದೆ. ಹೊರ ರೋಗಿ ಹಾಗೂ ಒಳ ರೋಗಿಗಳಿಗೆ ಸೌಲಭ್ಯ ಒದಗಿಸಲು ನಾಲ್ಕು ಪ್ರತಿಧ್ವನಿ ರೇಖಾ ಚಿತ್ರ ಪ್ರಯೋಗಾಲಯ ಆರು ಟ್ರೆಡ್‌ಮಿಲ್ ಪರೀಕ್ಷಾ ಲ್ಯಾಬ್,

ಆರು ಇ.ಸಿ.ಜಿ. ಲ್ಯಾಬ್ ಮತ್ತು ಇತರೆ ಲ್ಯಾಬ್‌ಗಳಾದ ಜೀವರಸಾಯನ ಶಾಸ್ತ್ರ, ಮಿಣಿ ಶಾಸ್ತ್ರ, ರೋಗ ವಿಧಾನ ಶಾಸ್ತ್ರ ರಕ್ತ ನಿಧಿ ಮುಂತಾದವುಗಳನ್ನು ಒದಗಿಸಲಾಗುತ್ತಿದೆ.

ಇ) ಮುಕ್ತಾಯದ ಹಂತದಲ್ಲಿದೆ.

ಈ) ಜನವರಿ 2000 ರಿಂದ ಡಿಸೆಂಬರ್ 2000ದ ವರೆಗೆ ಒಟ್ಟು 815 ತೆರೆದ ಹೃದಯ ಶಸ್ತ್ರ ಚಿಕಿತ್ಸೆಯನ್ನು ಮಾಡಿದ್ದು, ಸರಾಸರಿ ತಿಂಗಳಿಗೆ 65 ತೆರೆದ ಹೃದಯದ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ.

ಮಂಡ್ಯ ಜಿಲ್ಲಾ ಆಸ್ಪತ್ರೆಯ ಕಾಮಗಾರಿಗಳು.

149(446)

ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಜಿಲ್ಲಾ ಆಸ್ಪತ್ರೆ ಮಂಡ್ಯ, ಇಲ್ಲಿ ಕೆಹೆಚ್‌ಎಸ್‌ಡಿಪಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ?

ಆ. ಹಾಗಿದ್ದಲ್ಲಿ, ಅದರ ವಿವರಗಳೇನು?

ಇ. ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ?

ಡಾ|| ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ. ಹೌದು.

ಆ. ಈ ಆಸ್ಪತ್ರೆಯಲ್ಲಿ 5347 ಚದರ ಮೀಟರ್ ವಿಸ್ತೀರ್ಣದಲ್ಲಿ ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿ, ವಾರ್ಡ್‌ಗಳು, ರೇಡಿಯಾಲಜಿ ವಿಭಾಗ, ಹೊರರೋಗಿ ವಿಭಾಗ, ಗ್ಯಾರೇಜ್ ಮತ್ತು ರ್‍ಯಾಂಪ್ ನಿರ್ಮಾಣ, 5 ವೈದ್ಯರ ವಸತಿ ಗೃಹಗಳು, 10 ದಾದಿಯರ ವಸತಿ ಗೃಹಗಳು ಮತ್ತು 10 'ಡಿ' ಗ್ರೂಪ್ ನೌಕರರ ವಸತಿ ಗೃಹಗಳ ನಿರ್ಮಾಣ ಹಾಗೂ ಹಳೇ ಆಸ್ಪತ್ರೆ ನವೀಕರಣ ನೀರು ಸರಬರಾಜು, ನೈರ್ಮಲೀಕರಣ, ವಿದ್ಯುದೀಕರಣ ಕೈಗೊಳ್ಳಲಾಗಿದೆ. ಇದಲ್ಲದೆ ಹೆಚ್ಚುವರಿ ಕಾಮಗಾರಿಗಳಾದ ವರ್ಕ್‌ಶಾಪ್, ರಕ್ತನಿಧಿ ಕೇಂದ್ರ, ಶವಾಗಾರ ಮತ್ತು ಶೈತ್ಯಾಗಾರ, ಸೋಲಾರ್ ವಾಟರ್ ಹೀಟರ್, ಲ್ಯಾಂಡ್ ಸ್ಕೇಪಿಂಗ್ ಇತ್ಯಾದಿ ಕಾಮಗಾರಿಗಳನ್ನು ರೂ.65.54 ಲಕ್ಷಗಳಲ್ಲಿ